1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

ವಿಶೇಷ ಮೊಕದ್ದಮೆ ನಂಃ **83/2018**

| | | |
|---|---|---|
| ಸಾಕ್ಷಿದಾರರ ಹೆಸರು | - ರವೀಂದ್ರನಾಥ ಎಸ್ ಜಹಗೀರದಾರ್ | ಪಿಡಬ್ಲೂ - 11 |
| ತಂದೆಯ ಹೆಸರು | - ಶೇಷಗಿರಿರಾವ್ | ಸಿಡಬ್ಲೂ - 20 |
| ವಯಸ್ಸು | - 51 ವರ್ಷ | |
| ಉದ್ಯೋಗ | - ಡಿ ಎಸ್ ಪಿ , ಸಿ ಐ ಡಿ, ಬೆಂಗಳೂರು | |
| ವಾಸ ಸ್ಥಳ | - ಬೆಂಗಳೂರು | |

ದಿನಾಂಕಃ 19-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದ -

1. ದಿನಾಂಕಃ 04-11-2017 ರಿಂದ ದಿನಾಂಕಃ12-03-2020 ರವರೆಗೆ ನಾನು ಕೊಪ್ಪ ಉಪ ವಿಭಾಗದ ಡಿ.ವೈ.ಎಸ್.ಪಿ. ಯಾಗಿ ಕಾರ್ಯ ನಿರ್ವಹಿಸಿದ್ದೇನೆ .

2. ಈ ಪ್ರಕರಣದ ತನಿಖೆಯನ್ನು ನಡೆಸಲು ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿಗಳು ದಿಃ 10-01-2018 ರಂದು ನನಗೆ ಆದೇಶಿಸಿದ್ದು, ಸದರಿಯವರ ಆದೇಶವನ್ನು ಅದೇ ದಿನ ಪಡೆದುಕೊಂಡಿರುತ್ತೇನೆ. ಸದರಿ ಆದೇಶವನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು ನಿ.ಪಿ.17 ಎಂದು ಗುರುತಿಸಲಾಯಿತು. ಅದೇ ದಿನ ನಾನು ಈ ಪ್ರಕರಣದ ಕಡತವನ್ನು ಫ್ರಾಸಾ.9 ರವರಿಂದ ಪಡೆದು ಪರಿಶೀಲಿಸಿರುತ್ತೇನೆ.

3. ಅದೇ ದಿನ ಫ್ರಾಸಾ.3 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಖಾಂಡ್ಯ ಫಾರೆಸ್ಟ್ ಚೆಕ್ ಪೋಸ್ಟ್ ಹತ್ತಿರ ಬಿದಿರೆ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಆರ್ಚಿನ ಹತ್ತಿರ ಕೃತ್ಯ ನಡೆದಿದ್ದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸದರಿ ಸ್ಥಳಕ್ಕೆ ಫ್ರಾಸಾ-7 ಮತ್ತು ಚಾಸಾ.8 ರವರಿಗೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬರಮಾಡಿಕೊಂಡಿರುತ್ತೇನೆ. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದ್ದು,

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಬಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಹಾಜರಿದ್ದ ಪ್ರಾಸಾ.3 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ತೋರಿಸಿರುತ್ತಾರೆ. ಅಲ್ಲಿಂದ ಸುಮಾರು 3 ವರೆ ಕಿ.ಮೀ. ದೂರದಲ್ಲಿದ್ದ ಉಜ್ಜಿನಿ ಬಸ್ ನಿಲ್ದಾಣಕ್ಕೆ ಪ್ರಾಸಾ.3 ರವರು ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಸ್ಥಳಗಳಲ್ಲಿ ನಾನು ಮಧ್ಯಾಹ್ನ 3.30 ರಿಂದ ಸಂಜೆ 5 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು.

4. ಸದರಿ ಪಂಚನಾಮೆಯಲ್ಲಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿರುತ್ತೇನೆ ಮತ್ತು ಒಂದು ಫೋಟೋವನ್ನು ತೆಗೆಸಿರುತ್ತೇನೆ. ಸದರಿ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದೆ.

5. ನಂತರ ಸಾಕ್ಷಿದಾರರಾದ ಪ್ರಾಸಾ.4, 5, 6, ಚಾಸಾ.3, 6, 7 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ಪ್ರಾಸಾ.4 ರವರು ನಿಪಿ.6 ರಂತೆ ನನಗೆ ಹೇಳಿಕೆಯ ನ್ನು ನೀಡಿರುತ್ತಾರೆ. ಸದರಿ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸುವ ಸಮಯದಲ್ಲಿ ಪ್ರಾಸಾ.10 ರವರಿಂದ ವಿಡಿಯೋ ಚಿತ್ರಿಕರಿಸಿರುತ್ತೇನೆ. ಸದರಿ ವಿಡಿಯೋಗಳನ್ನು ಪ್ರಾಸಾ.10 ರವರು ಠಾಣೆಗೆ ಇಲಾಖಾವತಿಯಿಂದ ಒದಗಿಸಲಾಗಿದ್ದ ಕ್ಯಾಮೆರದಲ್ಲಿ ಚಿತ್ರಿಕರಿಸಿದ್ದು ನಂತರ ಸದರಿಯವರು ನನ್ನ ಆದೇಶದಂತೆ ಸದರಿ ವಿಡಿಯೋಗಳನ್ನು ಒಂದು ಖಾಲಿ ಡಿ.ವಿ.ಡಿ. ಗೆ ವರ್ಗಾಯಿಸಿ ನೀಡಿರುತ್ತಾರೆ ಮತ್ತು ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ಅಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ಸದರಿ ಡಿವಿಡಿ ಮತ್ತು ದೃಢೀಕರಣ ಪತ್ರ ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ.14

ಮತ್ತು ಪಿ.15 ಎಂದು ಗುರುತಿಸಲಾಗಿರುತ್ತದೆ. ನಿಪಿ.15 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.15(ಬಿ) ಎಂದು ಗುರುತಿಸಲಾಯಿತು.

6. ಅದೇ ದಿನ ಅಂದರೆ ದಿಃ 10-01-2018 ರಂದು ಫ್ರಾಸಾ.3 ರವರ ಜಾತಿಯ ಬಗ್ಗೆ ವರದಿಯನ್ನು ನೀಡುವಂತೆ ಚಿಕ್ಕಮಗಳೂರು ತಹಸೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ ಮತ್ತು ದಿಃ 26-02-2018 ರಂದು ಚಾಸಾ.14 ರವರಿಂದ ಫ್ರಾಸಾ.3 ರವರ ಜಾತಿಯ ಬಗ್ಗೆ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು.

7. ದಿಃ 10-01-2018 ರಂದು ಫ್ರಾಸಾ.3 ರವರ ಗಾಯದ ಪ್ರಮಾಣಪತ್ರವನ್ನು ನೀಡುವಂತೆ ಫ್ರಾಸಾ.8 ರವರಿಗೆ ಮನವಿ ಸಲ್ಲಿಸಿರುತ್ತೇನೆ ಮತ್ತು ಸದರಿಯವರಿಂದ ದಿಃ 18-03-2018 ರಂದು ಫ್ರಾಸಾ.3 ರವರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಬಿ) ಎಂದು ಗುರುತಿಸಲಾಯಿತು.

8. ದಿಃ 10-01-2018 ರಂದು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡಲು ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಗೆ ಮನವಿಯನ್ನು ಸಲ್ಲಿಸಿರುತ್ತೇನೆ ಮತ್ತು ದಿಃ 04-05-2018 ರಂದು ಸದರಿಯವರಿಂದ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.16 ಎಂದು ಗುರುತಿಸಲಾಗಿರುತ್ತದೆ.

9. 3 ಜನ ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದು ದಿಃ 13-01-2018 ರಂದು ನನ್ನ ಮುಂದೆ ಹಾಜರಾದ ಮೇರೆಗೆ

ನಾನು ದಸ್ತಗಿರಿ ಕ್ರಮ ಅನುಸರಿಸಿ ಅವರುಗಳನ್ನು ವಿಚಾರಣೆಗೆ ಒಳಪಡಿಸಿರುತ್ತೇನೆ ಮತ್ತು ಕೃತ್ಯಕ್ಕೆ ಬಳಸಿದ್ದ ಬೈಕ್ ಮತ್ತು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರು ಪಡಿಸುವಂತೆ 1 ನೇ ಆರೋಪಿಗೆ ನೋಟೀಸನ್ನು ನೀಡಿರುತ್ತೇನೆ.

10. ದಿಃ 19-02-2018 ರಂದು 1 ನೇ ಆರೋಪಿ ಕೃತ್ಯಕ್ಕೆ ಬಳಸಲಾದ ಕೆಎ-18-ಇಬಿ-0912 ನೊಂದಣಿ ಸಂಖ್ಯೆಯುಳ್ಳ ಬೈಕನ್ನು ನನ್ನ ಮುಂದೆ ಹಾಜರುಪಡಿಸಿದ್ದು, ಸದರಿ ಬೈಕನ್ನು ಫ್ರಾಸಾ.1 ಮತ್ತು 2 ರವರ ಸಮಕ್ಷಮ ಬಾಳೆಹೊನ್ನೂರು ಪೊಲೀಸ್ ಠಾಣೆಯ ಆವರಣದಲ್ಲಿ ಸಂಜೆ 5.45 ರಿಂದ 6.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತು ಪಪಿಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೋನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ 1 ನೇ ಆರೋಪಿ ಸದರಿ ಬೈಕಿಗೆ ಸಂಬಂಧಿಸಿದ ನೊಂದಣಿ ಪ್ರಮಾಣಪತ್ರ ಮತ್ತು ವಿಮಾ ಪಾಲಿಸಿಯ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಬೈಕನ್ನು ಮಾಲುಪಟ್ಟಿ ಸಂಃ 21/2018 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.18 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು ಗುರುತಿಸಲಾಯಿತು

11. ದಿಃ 18-05-2018 ರಂದು ಆರೋಪಿತರ ಜಾತಿಯ ಬಗ್ಗೆ ವರದಿಯನ್ನು ಚಾಸಾ.15 ರವರಿಂದ ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು

ನಿಪಿ.10(ಎ) ಎಂದು ಗುರುತಿಸಲಾಯಿತು.

12. ನಂತರ ನ್ಯಾಯಾಲಯದ ಆದೇಶದ ಮೇರೆಗೆ ಮೇಲೆ ಹೇಳಿದಂತೆ ಅಮಾನತು ಪಡಿಸಿಕೊಂಡಿದ್ದ ಬೈಕನ್ನು ದಿಃ 22-03-2018 ರಂದು ಸದರಿ ಬೈಕಿನ ಮಾಲೀಕರಾದ ಯು.ಎಂ.ಹೂವಪ್ಪಗೌಡ ಬಿನ್ ಮಂಜಪ್ಪಗೌಡರವರಿಗೆ ಚಾಸಾ.12 ಮತ್ತು 13 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಬಿಡುಗಡೆ ಮಾಡಿರುತ್ತೇನೆ ಮತ್ತು ಆ ಸಮಯದಲ್ಲಿ ಫೋಟೋವನ್ನು ತೆಗೆಸಿರುತ್ತೇನೆ. ಸದರಿ ಪಂಚನಾಮೆಯನ್ನು ಮತ್ತು ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ.9 ಮತ್ತು ನಿಪಿ.2 ಎಂದು ಗುರುತಿಸಲಾಗಿದ್ದು, ನಿಪಿ.9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

13. ತನಿಖೆಯಲ್ಲಿ ಆರೋಪಿತರ ವಿರುದ್ಧ ಆರೋಪ ಸಾಬೀತಾದ ಕಾರಣ ದಿನಾಂಕಃ 02-06-2018 ರಂದು ಅವರ ವಿರುದ್ಧ ಕರಡು ದೋಷಾರೋಪಣ ಪಟ್ಟಿಯನ್ನು ತಯಾರಿಸಿ ಅದನ್ನು ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸಲ್ಲಿಸಿ ದಿಃ 06-07-2018 ರಂದು ಸದರಿಯವರು ನೀಡಿದ ಆದೇಶವನ್ನು ಸ್ವೀಕರಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿತರು ಈ ದಿನ ಗೈರು ಹಾಜರಿದ್ದು ಅವರ ಪರ ವಕೀಲರು ಸಲ್ಲಿಸಿರುವ ವಿನಾಯಿಸಿ ಅರ್ಜಿಯಲ್ಲಿ ಆರೋಪಿತರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ).

<u>ಪಾಟೀ ಸವಾಲು: ಆರೋಪಿತರ ಪರವಾಗಿ ಶ್ರೀ ಎಸ್.ಕೆ.ಎಂ. ವಕೀಲರಿಂದ ಶ್ರೀ ಐ.ಎಸ್.ಟಿ. ವಕೀಲರ ಪರವಾಗಿಃ</u>

14. ದಿಃ 08-01-2018 ರಂದು ಫ್ರಾಸಾ.3 ರವರು ಬಾಳೆಹೊನ್ನೂರಿನಿಂದ ಉಜ್ಜಿನಿಗೆ ಬಸ್ಸಿನಲ್ಲಿ ಪ್ರಯಾಣಿಸಿದ್ದಾಗಿ ನಿಪಿ.4 ದೂರಿನಲ್ಲಿ ತಿಳಿಸಲಾಗಿದ್ದು ನೀವು ಫ್ರಾಸಾ.3 ರವರಿಂದ ಆ ಬಗ್ಗೆ ದಾಖಲೆಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಫ್ರಾಸಾ.3 ರವರು ಪ್ರಯಾಣಿಸುತ್ತಿದ್ದ ಬಸ್ಸಿನ ನಿರ್ವಾಹಕರ ವಿವರಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಬಸ್ಸಿನಲ್ಲಿ ಆ ದಿನ ಎಷ್ಟು ಜನ ಪ್ರಯಾಣಿಕರಿದ್ದರು ಎಂದು ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಬಸ್ಸಿನಲ್ಲಿ ಆ ದಿನ ಫ್ರಾಸಾ.3 ರವರು ಪ್ರಯಾಣಿಸಿದ್ದರು ಎಂದು ತೋರಿಸಲು ನೀವು ಅವರ ಟಿಕೇಟನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಫ್ರಾಸಾ.5 ರವರು ಆ ದಿನ ಸದರಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದರು ಎಂದು ತೋರಿಸಲು ನೀವು ಅವರ ಟಿಕೇಟನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಫ್ರಾಸಾ.4 ರವರು ಸದರಿ ಬಸ್ಸಿನ ಚಾಲಕರಾಗಿ ಆ ದಿನ ಕಾರ್ಯನಿರ್ವಹಿಸಿದ್ದರು ಎಂದು ತೋರಿಸಲು ನೀವು ಅವರ ಗುರುತಿನ ಚೀಟಿ ಮತ್ತು ಆ ದಿನ ಅವರು ಸದರಿ ಬಸ್ಸಿಗೆ ನಿಯೋಜನೆಗೊಂಡ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

15. ನಿಪಿ.5 ಪಂಚನಾಮೆಯನ್ನು ಖಾಂಡ್ಯ ಫಾರೇಸ್ಟ್ ಚೆಕ್ ಪೋಸ್ಟಿನ ಹತ್ತಿರ ಜರುಗಿಸಿದ್ದಾಗಿ ಹೇಳಿದ್ದೀರಿ ಸದರಿ ಚೆಕ್ ಪೋಸ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಪಂಚರನ್ನಾಗಿ ಕರೆಯಿಸಿ ಅವರ ಸಹಿಗಳನ್ನು ಪಡೆದುಕೊಳ್ಳಲು ನಿಮಗೆ ತೊಂದರೆ ಇತ್ತೇ ಎಂದರೆ ಸಾಕ್ಷಿ ಆ ಸಮಯದಲ್ಲಿ ಯಾರು ಇರಲಿಲ್ಲ ಎನ್ನುತ್ತಾರೆ. ಘಟನೆ ನಡೆಯಿತು ಎನ್ನಲಾದದ ಸಮಯದಲ್ಲಿ ಸದರಿ ಚೆಕ್ ಪೋಸ್ಟಿನಲ್ಲಿ ಯಾವ ಸಿಬ್ಬಂದಿಗಳನ್ನು, ಎಷ್ಟು ಅವಧಿಯವರೆಗೆ ನೇಮಿಸಲಾಗಿತ್ತು ಎಂದು

ಸಂಬಂಧಿಸಿದ ಫಾರೇಸ್ಟ ಇಲಾಖೆಯಿಂದ ಮಾಹಿತಿಯನ್ನು ಪಡೆದು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಘಟನೆ ನಡೆದ ಸ್ಥಳ ಸದರಿ ಚೆಕ್ ಪೋಸ್ಟಿನಿಂದ ಸುಮಾರು 300 ರಿಂದ 400 ಮೀಟರ್ ದೂರದಲ್ಲಿತ್ತು ಹಾಗಾಗಿ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ಸದರಿ ಪಂಚನಾಮೆಯ ಕಾಲಕ್ಕೆ ಸ್ಥಳೀಯರನ್ನು ಕರೆಯಿಸಿ, ವಿಚಾರಿಸಿ ಅವರ ಸಹಿಗಳನ್ನು ಪಡೆದುಕೊಳ್ಳಲು ತೊಂದರೆ ಇತ್ತೆ ಎಂದರೆ ಸಾಕ್ಷಿ ಅಲ್ಲಿ ಯಾರು ಇರಲಿಲ್ಲ ಎನ್ನುತ್ತಾರೆ.

16. ಉಜ್ಜಿನಿ ಬಸ್ ನಿಲ್ದಾಣದ ಹತ್ತಿರ ಮಹಜರನ್ನು ಜರುಗಿಸಲಾಗಿದೆ ಎಂದು ಹೇಳಿದ್ದೀರಿ ಅಲ್ಲಿಯ ಸ್ಥಳೀಯರನ್ನು ಪಂಚರನ್ನಾಗಿ ಕರೆಯಿಸಿ, ವಿಚಾರಿಸಿ ಅವರ ಸಹಿಗಳನ್ನು ಪಡೆದುಕೊಳ್ಳಲು ತೊಂದರೆ ಇತ್ತೆ ಎಂದರೆ ಸಾಕ್ಷಿ ಅಲ್ಲಿ ಯಾರು ಇರಲಿಲ್ಲ ಎನ್ನುತ್ತಾರೆ. ಘಟನೆ ನಡೆಯಿತು ಎಂದು ಹೇಳಲಾದ ಸಮಯದಲ್ಲಿ ಪ್ರಾಸಾ.3 ರವರು ಧರಿಸಿದ್ದ ಬಟ್ಟೆಗಳನ್ನು ನಾನು ಅಮಾನತು ಪಡಿಸಿಕೊಂಡಿಲ್ಲ. ಘಟನೆ ನಡೆಯಿತು ಎನ್ನಲಾದ ದಿನ ಪ್ರಾಸಾ.3 ರವರು ತಮ್ಮ ಮನೆಗೆ ಹೋಗಿದ್ದನ್ನು ನೋಡಿದ್ದ ಯಾವುದಾದರೂ ವ್ಯಕ್ತಿಗಳನ್ನು ನೀವು ವಿಚಾರಿಸಿ ಸಾಕ್ಷಿದಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

17. ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀವು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಅದು ಸಾರ್ವಜನಿಕ ರಸ್ತೆಯಾಗಿತ್ತು ಎನ್ನುತ್ತಾರೆ. ಸಾಮಾನ್ಯವಾಗಿ ಬಸ್ ಚಲಿಸುವ ಮಾರ್ಗ ಮಧ್ಯದಲ್ಲಿ ಯಾವುದೇ ತೊಂದರೆಯಾದರೆ ಅದರ ಹೊಣೆಯನ್ನು ಬಸ್ಸಿನ ಚಾಲಕ ಮತ್ತು ನಿರ್ವಾಹಕರು ತೆಗೆದುಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿ ಹಾಗೇನು ಇಲ್ಲ ಎನ್ನುತ್ತಾರೆ. ಪ್ರಯಾಣಿಕರು ಬಸ್ಸಿನ ಬಾಗಿಲ ಬಳಿ ನಿಲ್ಲುವುದು ಅಪರಾಧ ಬಸ್ಸಿನ ಚಾಲಕ ಮತ್ತು ನಿರ್ವಾಹಕರು ಅಲ್ಲಿ ಪ್ರಯಾಣಿಕರಿಗೆ ನಿಲ್ಲಲು ಬಿಡುವುದಿಲ್ಲ ಎಂದರೆ ಸಾಕ್ಷಿ ಪ್ರಾಸಾ.3 ರವರು ಬಸ್ಸಿನ ಬಾಗಿಲ ಬಳಿ ನಿಂತಿದ್ದಾಗಿ ತಿಳಿಸಿದ್ದಾರೆ ಎನ್ನುತ್ತಾರೆ. ಬಸ್ಸಿನ ಬಾಗಿಲಿಗೆ ಡೋರ್ ಇದ್ದ ಬಗ್ಗೆ

ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಘಟನೆ ನಡೆದ ಬಗ್ಗೆ ಬಸ್ಸಿನ ಪ್ರಯಾಣಿಕರು, ಚಾಲಕರು ಅಥವಾ ನಿರ್ವಾಹಕರು ನಿಮಗೆ ಮಾಹಿತಿ ನೀಡಿದ್ದರೆ ಎಂದರೆ ಸಾಕ್ಷಿ ಠಾಣೆಗೆ ನೀಡಿರಬಹುದು ನನಗೆ ನೀಡಿಲ್ಲ ಎನ್ನುತ್ತಾರೆ.

18. ಫ್ರಾಸಾ.3 ರವರು ನೀಡಿದ್ದಾರೆ ಎಂದು ಹೇಳಲಾದ ದೂರು ಅಥವಾ ಹೇಳಿಕೆಯಲ್ಲಿ ಬೈಕಿನ ನೊಂದಣಿ ಸಂಖ್ಯೆ ಕಂಪನಿ ಮತ್ತು ಬಣ್ಣದ ಬಗ್ಗೆ ಮಾಹಿತಿ ನೀಡಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರೋಪಿತರು ಮತ್ತು ಫ್ರಾಸಾ.3 ರವರು ಒಂದೇ ಗ್ರಾಮದ ವಾಸಿಗಳು ಎಂದು ತೋರಿಸಲು ನೀವು ಸಂಬಂಧಿಸಿದ ಇಲಾಖೆಯಿಂದ ದಾಖಲೆಗಳನ್ನು ಪಡೆದು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

19. ನೀವು ಹೇಳಿದಂತೆ ಯಾವುದೇ ಸಾಕ್ಷಿದಾರರು ನಿಮಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಸ್ಥಳಕ್ಕೆ ಭೇಟಿ ನೀಡಿಲ್ಲ, ಅಲ್ಲಿ ಪಂಚರ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಯಾವುದೇ ಫೋಟೋಗಳನ್ನು ತೆಗೆಸಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ದಾಖಲೆಗಳನ್ನು ಸಂಬಂಧಿಸಿದ ಅಧಿಕಾರಿಗಳಿಂದ ಪಡೆದಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿಯೊಂದಿಗೆ ಶಾಮೀಲಾಗಿ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಆತ ನೀಡಿದ್ದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಸಹಾ ಅವರ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ